ಮಧ್ಯಂತರ ಅರ್ಜಿಯ ಮೇಲಿನ ಈ ದಿನದ ಆದೇಶದ ಮೇರೆಗೆ ಸಾಕ್ಷಿಯನ್ನು ರೂ.500/- ಖರ್ಚಿನೊಂದಿಗೆ ಸಾಕ್ಷ್ಯನುಡಿಯಲು ಪುನಃ ಕರೆ ಕಳುಹಿಸಲಾಯಿತು.

ದಿನಾಂಕಃ 25-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ-ಪ್ರತಿವಾದಿ ನಂ.1, 6, 7 ಪರ ಶ್ರೀ. ಯು ಎಸ್ ಕೆ ವಕೀಲರಿಂದ .**

ಸರ್ವೆ ನಂ.41/1 ಬಿ, 41/1 ಎ ಇವುಗಳ ಕೈಬರಹ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ 3 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನಿಶಾನೆ ಅಂತಾ ಗುರುತಿಸಲು ಪ್ರತಿವಾದಿ ನಂ.2 ರಿಂದ 5 ರವರ ಪರ ವಕೀಲರು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು ರುಜುವಾತಿನ ಭಾರದೊಂದಿಗೆ ಸದರಿ ದಾಖಲೆಗಳನ್ನು ನಿಶಾನೆ ಅಂತಾ ಗುರುತಿಸಲಾಯಿತು. ಆಸ್ತಿ ನಂ.311 ಎ ಮತ್ತು 311 ಬಿ ಇವುಗಳ 1961-62 ನೇ ಸಾಲಿನ ಕರಾಕರಣೆಯ ಯಾದಿ ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನಿಶಾನೆ ಅಂತಾ ಗುರುತಿಸಲು ಪ್ರತಿವಾದಿ ನಂ.2 ರಿಂದ 5 ರವರ ಪರ ವಕೀಲರು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು ರುಜುವಾತಿನ ಭಾರದೊಂದಿಗೆ ಸದರಿ ದಾಖಲೆಗಳನ್ನು ನಿಶಾನೆ ಅಂತಾ ಗುರುತಿಸಲಾಯಿತು.

**ಪಾಟೀಸವಾಲುಃ-ಪ್ರತಿವಾದಿ ನಂ.2 ರಿಂದ 5 ರವರ ಪರ ಶ್ರೀ. ವಿ ಬಿ ಟಿ ವಕೀಲರಿಂದ.**

ಈ ಹಿಂದೆ ಕಂದಾಯ ದಾಖಲೆಗಳು ತಹಶೀಲ್ದಾರ ಕಚೇರಿಯಲ್ಲಿ ಸುಟ್ಟು ಹೋಗಿರುವುದಾಗಿ ಹೇಳಿದ್ದು ಈಗ ನಿಡಿ-1 ರಿಂದ 4 ನನ್ನ ಮನೆಯಲ್ಲಿ ದೊರೆತಿದ್ದು ಅವುಗಳನ್ನು ಈಗ ಹಾಜರುಪಡಿಸಿರುತ್ತೇನೆ. ನಿಡಿ-1 ರಿಂದ 4 ದಾಖಲೆಗಳು ಯಾರಿಂದ ಪಡೆದುಕೊಂಡಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ಅವುಗಳಿಗೆ ಸೀಲು, ಸಿಕ್ಕೆ ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳಿಗೆ ರೌಂಡ್ ಸೀಲು ಇಲ್ಲ

ಎಂದರೆ ಸರಿ. ಸದರಿ ಆಸ್ತಿಗಳು ನನ್ನ ತಂದೆಗೆ ಹೇಗೆ ಬಂದಿರುತ್ತವೆ ಎಂದು ಗೊತ್ತಿಲ್ಲ. ಸದರಿ ಆಸ್ತಿಗಳು ನನ್ನ ತಂದೆಯಿಂದ ಬಂದಿರುವುದಾಗಿ ಹೇಳಿದ್ದು ಅದರ ಕುರಿತು ಕಾಗದ ಪತ್ರ ಇಲ್ಲ ಎಂದರೆ ಸರಿ. ನಿಡಿ-1 ರಿಂದ 3 ದಾಖಲೆಗಳ ಪ್ರಕಾರ ನನ್ನ ತಂದೆಗಾಗಲೀ, ನನಗಾಗಲೀ ಭೂ ನ್ಯಾಯ ಮಂಡಳಿಯಿಂದ ಸಂಪೂರ್ಣ ಸಾಗುವಳಿ ಹಕ್ಕು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಿಂದ 4 ದಾಖಲೆಗಳನ್ನು ನಾನು ಸೃಷ್ಟಿಸಿ ಹಾಜರುಪಡಿಸಿದ್ದು ಅವು ಈ ಪ್ರಕರಣಕ್ಕೆ ಏನು ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ-ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ.**

ನನ್ನ ತಂದೆ ಬಸವಣ್ಣೆಪ್ಪ ಇವರಿಗೆ ಇಬ್ಬರು ಹೆಂಡಂದಿರು ಇರುತ್ತಾರೆ. ಮೊದಲನೇಯವಳು ನನ್ನ ತಾಯಿ ಯಲ್ಲವ್ವ, 2 ನೇಯವಳು ಬಸವ್ವ ಇರುತ್ತಾರೆ. ನನ್ನ ತಾಯಿ ತೀರಿಕೊಂಡ ನಂತರ ನನ್ನ ತಂದೆ ಬಸವ್ವ ಇವಳನ್ನು ವಿವಾಹವಾಗಿರುತ್ತಾರೆ ಎಂದರೆ ಇರಬಹುದು. ನನ್ನ ತಾಯಿಗೆ ನಾನು ಮಾತ್ರ ಒಬ್ಬನೇ ಮಗ ಎಂದರೆ ಸರಿ. ಬಸವ್ವಳ ಹೊಟ್ಟೆಯಿಂದ ಪ್ರತಿವಾದಿ ನಂ.1, 2 ಮತ್ತು ಮೃತ ನೀಲವ್ವ ಜನಿಸಿರುತ್ತಾರೆ. ನೀಲವ್ವ ಈಗ ಜೀವಿತ ಇರುವುದಿಲ್ಲ. ನೀಲವ್ವಳಿಗೆ ಪ್ರತಿವಾದಿ ನಂ.3 ರಿಂದ 5 ಮಕ್ಕಳು ಇರುತ್ತಾರೆ. 2 ನೇ ಪ್ರತಿವಾದಿ ನನ್ನ ಹೆಂಡತಿ ಇರುತ್ತಾರೆ. ಪ್ರತಿವಾದಿ ನಂ.3 ರಿಂದ 5 ನನ್ನ ಮೊದಲನೇ ಹೆಂಡತಿಯ ಮಕ್ಕಳು ಇರುತ್ತಾರೆ. ಚನ್ನಬಸವ್ವ ನನ್ನ 2 ನೇ ಹೆಂಡತಿ ಇದ್ದು, ಪ್ರತಿವಾದಿ ನಂ.2 ನನ್ನೊಂದಿಗೆ ಬಾಳುವೆ ಮಾಡಲು ಬರದೇ ಇದ್ದಿದ್ದರಿಂದ ಆಕೆಯನ್ನು ವಿವಾಹ ಆಗಿರುತ್ತೇನೆ. ಆಕೆಯ ಹೊಟ್ಟೆಯಿಂದ ಪ್ರತಿವಾದಿ ನಂ.7 ಜನಿಸಿರುತ್ತಾರೆ. ದಾವಾದ ಆಸ್ತಿಗಳು ಭೂ ನ್ಯಾಯ ಮಂಡಳಿಯಿಂದ ಬಂದ ಆಸ್ತಿಗಳು ಇರುತ್ತವೆ. ದಾವಾ ಆಸ್ತಿಗಳ ಮೂಲ ಮಾಲೀಕರು ದಾವಲ್‌ಖಾದರ್ ಗೌಸ್ ಮೋದಿನ್ ಬಾಹುದ್ದೀನ ಇನಾಮದಾರ ಇವರ ಆಸ್ತಿಗಳು ಎಂದರೆ ಸರಿ. ಮೂಲ ಸರ್ವೇ ನಂ.41 ಭೂ ನ್ಯಾಯ ಮಂಡಳಿಯಿಂದ ಬಂದ ಆಸ್ತಿ ಎಂದರೆ ಸರಿ. ನನ್ನ ಅಡ್ಡ ಹೆಸರು ಶಾಲಾ ದಾಖಲೆಗಳಲ್ಲಿ ಸುಬ್ಬಣ್ಣವರ ಎಂದು ಹಾಗೂ ಉಳಿದ ದಾಖಲೆಗಳಲ್ಲಿ ಕಳ್ಳಿಮನಿ ಅಂತಾ ಇರುತ್ತದೆ. 1 ನೇ ವಾದಿಯ ಅಡ್ಡ ಹೆಸರು ಸುಬ್ಬಣ್ಣವರ ಅಂತಾ ಇರುತ್ತದೆ ಎಂದರೆ ಸರಿ. 2 ನೇ ವಾದಿಯ ಅಡ್ಡ ಹೆಸರು ಕಳ್ಳಿಮನಿ ಅಂತಾ ಇರುತ್ತದೆ

ಎಂದರೆ ಸರಿ. ಬಸವ್ವ ಇವಳ ಮಗಳು ನೀಲವ್ವ ಇವಳನ್ನು ಚನ್ನಪ್ಪ ಪವಾಡಿಯವರೊಂದಿಗೆ ವಿವಾಹ ಮಾಡಿ ಕೊಟ್ಟಿದ್ದು ಇತ್ತು ಎಂದರೆ ಸರಿ. ವಾದಿಯರ ಹಬ್ಬ ಹರಿದಿನ, ಸಮಾರಂಭದಲ್ಲಿ ನಾವುಗಳು ಪಾಲ್ಗೊಳ್ಳುತ್ತೇವೆ ಎಂದರೆ ಸರಿ. 7 ನೇ ಪ್ರತಿವಾದಿಯ ವಿವಾಹ ಸಮಾರಂಭಕ್ಕೆ ವಾದಿಯರು ಬೆಳಗಾವಿಗೆ ಬಂದಿದ್ದರು ಎಂದರೆ ಸರಿ. ವಾದಿಯರು ಬಸವಣ್ಣೆಪ್ಪ ಇವರ ಮಕ್ಕಳು ಇರುತ್ತಾರೆ. ಬಸವಣ್ಣೆಪ್ಪ ಮತ್ತು ಬಸಲಿಂಗಪ್ಪ ಅಣ್ಣ-ತಮ್ಮಂದಿರು ಎಂದರೆ ಸರಿ. ನನ್ನ ಅಜ್ಜನ ಹೆಸರು ಸಹ ಶೆಟ್ಟೆಪ್ಪ ಇರುತ್ತದೆ. ಬಸವಣ್ಣೆಪ್ಪ ಮತ್ತು ಬಸಲಿಂಗಪ್ಪ ಇವರ ಹೆಸರುಗಳು ದಾವಾ ಆಸ್ತಿಯ ಪಹಣಿಗಳಲ್ಲಿ ಜಂಟಿಯಾಗಿ 1977 ರಲ್ಲಿ ಇದ್ದವು ಎಂದರೆ ಸರಿ. 1980-81 ರಲ್ಲಿಯೂ ಸಹ ಜಂಟಿಯಾಗಿ ಇದ್ದವು ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವ ಮೊದಲು 1980-81 ರಲ್ಲಿ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಹಚ್ಚಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಮನೆ ಆಸ್ತಿ 1961-62 ರಲ್ಲಿ ನನ್ನ ತಂದೆ ಬಸವಣ್ಣೆಪ್ಪ ಮತ್ತು ಆತನ ಸಹೋದರ ಬಸಲಿಂಗಪ್ಪ ಇವರ ಹೆಸರಿನಲ್ಲಿ ಜಂಟಿಯಾಗಿ ಇತ್ತು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ಹೆಂಡತಿಯ ತವರು ಮನೆಯಿಂದ ಬಂದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೂ ಪಾಲು ಇರುತ್ತದೆ ಎಂದರೆ ಸರಿ.

ಮರವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).